

ದಿವಾಕರ ಸಾಯದಿರುತ್ತಿದ್ದರೆ ಖಂಡಿತವಾಗಿಯೂ ನಾನೊಬ್ಬ ಕತೆಗಾರನಾಗುತ್ತಿರಲಿಲ್ಲ ಅಥವಾ ದಿವಾಕರ ಸತ್ತದ್ದರಿಂದಲೇ ನಾನು ಯೋಚನೆ ಮಾಡುವುದನ್ನು ಕಲಿತದ್ದು ಎನ್ನುವುದನ್ನು ನಾನೊಪ್ಪುವುದಿಲ್ಲ. ದಿವಾಕರ ಸತ್ತನಂತರ ಅವನ ಬಗ್ಗೆ ಮೊದಲನೆಯದಾಗಿ ಬರೆಯತೊಡಗಿದ್ದಕ್ಕೆ ಅಂತಹ ಅಪವಾದಕ್ಕೆ ನಾನು ಗುರಿಯಾದರೂ, ಅದೊಂದು ಅನನ್ವಿತ ವಿಷಯವೆಂದು ಹೇಳಲು ಏನೆಲ್ಲ ಸಾಕ್ಷ್ಯಾಧಾರಗಳೊಂದಿಗೆ ಸಾಬೀತು ಮಾಡಲು ಪ್ರಯತ್ನಿಸಿದ್ದೆ ನನ್ನ ಕತಾ ಸಾಮರ್ಥ್ಯಕ್ಕೂ ಮತ್ತು ದಿವಾಕರನ ಸಾವಿಗೂ ಹೆಚ್ಚು ಸಂಬಂಧವನ್ನು ಕಲ್ಪಿಸಲು ಪೂರಕವಾಯಿತೆಂದು ನನ್ನ ಭಾವನೆ. ಆದರೂ ಒಮ್ಮೊಮ್ಮೆ ಗುಮಾನಿ. ದಿವಾಕರ